**<u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.</u>**

**<u>ಸಿ.ಸಿ.ನಂ.118/2019</u>**

| | | | |
|---|---|---|---|
| ಸಾಕ್ಷಿದಾರರ ಹೆಸರು | ಮಂಜುನಾಥ ಹೊಸೂರೆಣ್ಣನವರ | ಸಿಡಬ್ಲ್ಯೂ | 4 |
| ತಂದೆ ಹೆಸರು | ರಾಮಪ್ಪ | ಪಿಡಬ್ಲ್ಯೂ | 3 |
| ವಯಸ್ಸು | 27 ವರ್ಷ | | |
| ಉದ್ಯೋಗ | ಗಾರೆ ಕೆಲಸ | | |
| ವಾಸಸ್ಥಳ | ಬೆನಕನಹಳ್ಳಿ ತಾಃ ಹಾವೇರಿ | | |

**<u>ದಿಃ 25.09.2023 ರಂದು ಸಾಕ್ಷಿದಾರರನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**
**<u>ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದ.</u>**

**1).** ಈಗ್ಗೆ 5 ವರ್ಷಗಳ ಹಿಂದೆ 2 ನೇ ಆರೋಪಿ ಮತ್ತು ಚಾ.ಸಾ-1 ರವರ ನಡುವೆ ಗಲಾಟೆಯಾಗಿತ್ತು. ಎರಡು ದಿನಕ್ಕೆ, ಮೂರು ದಿನಕ್ಕೆ ಒಂದು ಸಲ ಗಂಡ-ಹೆಂಡತಿ ಗಲಾಟೆ ಮಾಡಿಕೊಳ್ಳುತ್ತಿದ್ದರು, ನಾವು ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಗಲಾಟೆ ಮಾಡಿದ್ದಕ್ಕಾಗಿ ಚಾ.ಸಾ-1 ರವರ ಅಣ್ಣ ಆಕೆಯನ್ನು ಅವರ ಮನೆಗೆ ಕರೆದುಕೊಂಡು ಹೋಗಿದ್ದಾರೆ. 2 ನೇ ಆರೋಪಿ 4 ನೇ ಆರೋಪಿಯನ್ನು ಎರಡನೇ ಮದುವೆ ಮಾಡಿಕೊಂಡಿದ್ದಾರೆ. 2 ನೇ ಆರೋಪಿ ಚಾ.ಸಾ-1 ರವರಿಗೆ ಏನೇನು ಅನ್ನುತ್ತಿದ್ದ ಎಂದು ನಾವು ಕೇಳುತ್ತಿರಲಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತು ಮಾಡಿಲ್ಲ. ಸಾಕ್ಷಿಗೆ 17 ಪೋಟೋಗಳನ್ನು ತೋರಿಸಿದ್ದು, ಸಾಕ್ಷಿಯು ಇದೇ ಸಲ ಮೊದಲಬಾರಿಗೆ ನೋಡುತ್ತಿದ್ದೇನೆ ಎಂದು ಉತ್ತರಿಸಿದ್ದಾರೆ. 2 ಮತ್ತು 4 ನೇ ಆರೋಪಿತರ ಮದುವೆ ಪೋಟೋಗಳು ಎಂದು ಉತ್ತರಿಸಿದ್ದಾರೆ. 2 ಮತ್ತು 4 ನೇ ಆರೋಪಿತರ ಮದುವೆ ಊರಿನ ಹೊರಗಡೆ ಶಿಬಾರದಲ್ಲಿ ಆಗಿರುವದು ಮದುವೆ ಪೋಟೋಗಳಿಂದ ಕಂಡುಬರುತ್ತದೆ. ಮದುವೆಗೆ ನಾನು ಹೋಗಿಲ್ಲ. ಚಾ.ಸಾ-10 ರವರು ಗೊತ್ತು, ಅವರು ನಮ್ಮ ಊರಿನವರು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ, ಪರಿಶೀಲಿಸಿ ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ ಹಿ.ಸ.ಸ.ಅಭಿಯೋಜಕರಿಂದ.</u>**

**2)** ಚಾ.ಸಾ-**10** ರವರು ತನ್ನ ಮೊಬೈಲನಿಂದ **2** ಮತ್ತು **4** ನೇ ಆರೋಪಿತರ ಮದುವೆಯನ್ನು ಪೋಟೋಗಳನ್ನು ತೆಗೆದು, ವಿಡಿಯೋಗಳನ್ನು ಮಾಡಿದ್ದ, ಅವುಗಳನ್ನು ನನ್ನ ಮತ್ತು ಚಾ.ಸಾ-**5** ರವರ ಸಮಕ್ಷಮ ಜಪ್ತು ಮಾಡಿದ್ದರು ಅಂದರೆ ಸರಿಯಲ್ಲ. ಜಪ್ತು

ಪಂಚನಾಮೆ ಮತ್ತು ಸಾಕ್ಷಿದಾರರ ಹೇಳಿಕೆ ಇಲ್ಲದ ಕಾರಣ ನಿಶಾನೆಯಾಗಿ ಗುರುತಿಸಿರುವದಿಲ್ಲ. **2** ನೇ ಆರೋಪಿ ಚಾ.ಸಾ**-1** ರವರಿಗೆ ಅವಾಚ್ಯ ಶಬ್ದಗಳಿಂದ ಕೊಲೆ ಬೆದರಿಕೆ ಹಾಕುತ್ತಿದ್ದ ಅಂದರೆ ಸರಿಯಲ್ಲ. ನನಗೆ ಎಲ್ಲ ವಿಚಾರ ಗೊತ್ತಿದ್ದರೂ, ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ.ಎಸ್.ಎನ್.ಹೆಚ್ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಯಾವುದೇ ಸಕಾರಣಗಳು ಇರುವದಿಲ್ಲ, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.